**File No.DPAR/281/EGM/2020-DESK1-dparegovsec**

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ರಾಜ್ಯ ಸರ್ಕಾರದ ಎಲ್ಲಾ ಜಾಲತಾಣಗಳ ಏಕರೂಪತೆ ಹಾಗೂ ವಿಕಲಚೇತನ ಸ್ನೇಹಿಯಾಗಿ ರೂಪಿಸುವ ಕುರಿತು.

**ಓದಲಾಗಿದೆ:**

1. ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆ ಮತ್ತು ಪಿಂಚಣಿ ಮಂತ್ರಾಲಯ, ಕೇಂದ್ರ ಸರ್ಕಾರ ಇವರ ಪತ್ರ ಸಂಖ್ಯೆ: K-11022/99/2010-AR, dated: 07-09-2011
2. ಮಾನ್ಯ ಸರ್ವೋಚ್ಚ ನ್ಯಾಯಾಲಯದ ರಿಟ್ ಅರ್ಜಿ (ಸಿವಿಲ್) ಸಂಖ್ಯೆ: 243/2005ರ ದಿನಾಂಕ: 15-12-2017ರ ತೀರ್ಪು
3. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಇ-ಆಡಳಿತ ಕೇಂದ್ರ ಇವರ ಕಡತ ಸಂಖ್ಯೆ: CeG-22021/2/2020

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮಾಂಕ (1)ರ ದಿನಾಂಕ: 07-09-2011ರ ಪತ್ರದಲ್ಲಿ NIC ರವರು Guidelines for Indian Government websites ಎಂದು ಸಿದ್ಧಪಡಿಸಿದ್ದು, ಸದರಿ ಮಾರ್ಗಸೂಚಿಗಳನ್ನು ಸರ್ಕಾರದ ಎಲ್ಲಾ ಇಲಾಖೆಗಳಲ್ಲಿ ಅಳವಡಿಸಿಕೊಳ್ಳಲು ಸೂಚಿಸಲಾಗಿರುತ್ತದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯವು ಮೇಲೆ ಓದಲಾದ ಕ್ರಮಾಂಕ (2)ರ ದಿನಾಂಕ: 15-12-2017ರಲ್ಲಿ ತೀರ್ಪು ನೀಡಿದ್ದು, ಅದರ ಘೋಷಾವಾರು ಈ ಕೆಳಕಂಡಂತಿದೆ:

> "Comprehensive revision of target deadliness under accessibility of knowledge and ICT Ecosystem. At least 50% of Central and State Government websites are to meet accessibility standards by March 2017. At least 50% of the public documents are to meet accessibility standards by March 2018".

ಮೇಲೆ ಓದಲಾದ ಕ್ರಮಾಂಕ (3)ರ ಇ-ಆಡಳಿತ ಕೇಂದ್ರದ ಕಡತದಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ಇಲಾಖೆಗಳು, ನಿಗಮಗಳು, ಮಂಡಳಿಗಳು, ನಿಯಮಿತಗಳು, ಸಂಸ್ಥೆಗಳು, ಅಕಾಡೆಮಿಗಳು, ನೋಂದಾಯಿತ ಸರ್ಕಾರಿ ಸೊಸೈಟಿಗಳು, ಟ್ರಸ್ಟ್ ಮತ್ತು ಪ್ರಾಧಿಕಾರಗಳು ಮುಂತಾದವುಗಳು ತಮ್ಮ ಜಾಲತಾಣಗಳನ್ನು ಎನ್.ಐ.ಸಿ ಅಥವಾ ಖಾಸಗಿ ಸಂಸ್ಥೆಗಳಿಂದ ಅಭಿವೃದ್ಧಿಪಡಿಸಿ, ಕರ್ನಾಟಕ ರಾಜ್ಯ ದತ್ತಾಂಶ ಕೇಂದ್ರದಿಂದ (Karnataka State Data Centre) ಹೊರಗೆ ಇತರೆ ಖಾಸಗಿ ಸಂಸ್ಥೆಗಳಲ್ಲಿ ಪ್ರಕಟಣೆ ಮಾಡುತ್ತಿರುವುದು ಕಂಡುಬಂದಿದೆ.

ಜಾಲತಾಣಗಳಲ್ಲಿ ರಾಷ್ಟ್ರೀಯ ಗುರುತ್ವದ ಅಂಶಗಳು, ಗೌಪ್ಯತೆ ನಿರ್ಮಾಣದ ಅಂಶಗಳು, ಮಾಹಿತಿಯ ವ್ಯಾಪ್ತಿ (ಸೇವೆಗಳು, ಯೋಜನೆಗಳು, ನಮ್ಮ ಬಗ್ಗೆ, ಸಂಪರ್ಕಿಸಿ, ದಾಖಲೆಗಳು, ನಮೂನೆಗಳು, ಪ್ರಕಟಣೆಗಳು, ನೇಮಕಾತಿ ಮತ್ತು ಟೆಂಡರ್, ಆದೇಶ ಮತ್ತು ಸುತ್ತೋಲೆಗಳು ಇತ್ಯಾದಿ ಮಾಹಿತಿಯ ಬಗ್ಗೆ) (Services, Projects, etc.), ಮಾಹಿತಿಯ ಗುಣಮಟ್ಟ, ವಿನ್ಯಾಸ ಮತ್ತು ಅಭಿವೃದ್ಧಿ, ಪ್ರಕಟಣೆ, ಪ್ರಚಾರ ಮತ್ತು ಜಾಲತಾಣದ ನಿರ್ವಹಣೆ ಬಗ್ಗೆ ಮಾರ್ಗದರ್ಶನ ನೀಡುವ, ಮಾಹಿತಿ ತಂತ್ರಜ್ಞಾನ ಕಾಯ್ದೆ - 2008ರ ಪ್ರಕಾರ ರಚಿತವಾಗಿರುವ "ಭಾರತ ಸರ್ಕಾರದ ಜಾಲತಾಣ ಮಾರ್ಗಸೂಚಿಗಳು (Guidelines for Indian Government Websites-GIGW)" ಗಳನ್ನು ಅನುಸರಿಸದೇ ಇರುವುದು ಪ್ರಸ್ತುತ ರಾಜ್ಯ ಸರ್ಕಾರದ ಜಾಲತಾಣಗಳಲ್ಲಿ ಕಂಡು ಬರುತ್ತಿದೆ.

ಸರ್ಕಾರದ ಜಾಲತಾಣಗಳು ವಿಕಲಚೇತನ ಸ್ನೇಹಿಯಾಗಿರಬೇಕು ಎಂಬ ಮಾನ್ಯ ಸರ್ವೋಚ್ಚ ನ್ಯಾಯಾಲಯ ನೀಡಿರುವ ನಿರ್ದೇಶನಕ್ಕೆ (ಪ್ರಕರಣ ಸಂಖ್ಯೆ 243/2005 ರಾಜೀವ್ ರತೋರಿ ವಿರುದ್ಧ ಭಾರತ ಸರ್ಕಾರ ಮತ್ತಿತರರು) ಅನುಗುಣವಾಗಿ ಜಾಲತಾಣಗಳಲ್ಲಿ ಮಾರ್ಗಸೂಚಿಗಳನ್ನು ಅನುಷ್ಠಾನಗೊಳಿಸುವುದು ಅತೀ ಜರೂರು ಆಗಿರುತ್ತದೆ.

ಸರ್ಕಾರದ ಜಾಲತಾಣಗಳಲ್ಲಿ ಕನ್ನಡ ಬಳಕೆ, ಶಿಷ್ಟತೆ, ಏಕರೂಪತೆ ಮತ್ತು ಸುಲಭಗ್ರಾಹ್ಯತೆ ಕುರಿತು ಕನ್ನಡ ಅಭಿವೃದ್ಧಿ ಪ್ರಾಧಿಕಾರವು 2017ರಲ್ಲಿ ರಾಜ್ಯ ಸರ್ಕಾರಕ್ಕೆ ಶಿಫಾರಸ್ಸುಗಳನ್ನು ಮಾಡಿರುತ್ತದೆ. ಈ ಶಿಫಾರಸ್ಸಿನ್ವಯ ಕನ್ನಡ ಭಾಷೆಯ ಸುಲಭ ಮತ್ತು ಕಡ್ಡಾಯ ಅನುಷ್ಠಾನಕ್ಕಾಗಿ ಎಲ್ಲಾ ಜಾಲತಾಣಗಳು ರಾಜ್ಯ ದತ್ತಾಂಶ ಕೇಂದ್ರದಲ್ಲಿ ಪ್ರಕಟವಾಗುವಂತೆ ಕಡ್ಡಾಯಗೊಳಿಸಿ ಆದೇಶಿಸುವಂತೆ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಇ-ಆಡಳಿತ ಕೇಂದ್ರ ಇವರು ಕೋರಿರುತ್ತಾರೆ.

**File No.DPAR/281/EGM/2020-DESK1-dparegovsec**

ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಇ-ಆಡಳಿತ ಕೇಂದ್ರ ಇವರ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದ್ದು, ಕೇಂದ್ರ ಸರ್ಕಾರದ ಮಾರ್ಗಸೂಚಿಗಳ ಹಿನ್ನೆಲೆಯಲ್ಲಿ ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಸಲ್ಲಿಸಿರುವ ವರದಿಯ ಶಿಫಾರಸ್ಸುಗಳನ್ನು ಅಂಗೀಕರಿಸಿ, ಸರ್ಕಾರದ ಇಲಾಖೆಗಳು, ನಿಗಮಗಳು, ಮಂಡಳಿಗಳು, ನಿಯಮಿತಗಳು, ಸಂಸ್ಥೆಗಳು, ಆಕಾಡೆಮಿಗಳು, ನೋಂದಾಯಿತ ಸರ್ಕಾರಿ ಸೊಸೈಟಿ ಮತ್ತು ಪ್ರಾಧಿಕಾರ ಮುಂತಾದವುಗಳ ಅಧಿಕೃತ ಜಾಲತಾಣಗಳಲ್ಲಿ ಕನ್ನಡ ಭಾಷೆ ಬಳಕೆ, ಶಿಷ್ಟತೆ, ಏಕರೂಪತೆ, ಸುಲಭ ಗ್ರಾಹ್ಯತೆ, ದೃಷ್ಟಿ ವಿಕಲಾಂಗರ ಸ್ನೇಹಿಯಾದ ಜಾಲತಾಣಗಳನ್ನು ರೂಪಿಸಲು ಸರ್ಕಾರವು ನಿರ್ಧರಿಸಿರುವ ಕಾರಣ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 281 ಇಜಿಎಂ 2020**
**ಬೆಂಗಳೂರು, ದಿನಾಂಕ:15ನೇ ಫೆಬ್ರವರಿ 2021**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕೇಂದ್ರ ಸರ್ಕಾರದ ಮಾರ್ಗಸೂಚಿಗಳ ಹಿನ್ನೆಲೆಯಲ್ಲಿ ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಸಲ್ಲಿಸಿರುವ ವರದಿಯ ಶಿಫಾರಸ್ಸಗಳನ್ನು ಅಂಗೀಕರಿಸಿ, ಸರ್ಕಾರದ ಇಲಾಖೆಗಳು, ನಿಗಮಗಳು, ಮಂಡಳಿಗಳು, ನಿಯಮಿತಗಳು, ಸಂಸ್ಥೆಗಳು, ಆಕಾಡೆಮಿಗಳು, ನೋಂದಾಯಿತ ಸರ್ಕಾರಿ ಸೊಸೈಟಿ ಮತ್ತು ಪ್ರಾಧಿಕಾರ ಮುಂತಾದವುಗಳ ಅಧಿಕೃತ ಜಾಲತಾಣಗಳಲ್ಲಿ ಕನ್ನಡ ಭಾಷೆ ಬಳಕೆ, ಶಿಷ್ಟತೆ, ಏಕರೂಪತೆ, ಸುಲಭ ಗ್ರಾಹ್ಯತೆ, ದೃಷ್ಟಿ ವಿಕಲಾಂಗರ ಸ್ನೇಹಿಯಾದ ಜಾಲತಾಣಗಳನ್ನು ರೂಪಿಸಲು ಈ ಕೆಳಕಂಡ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಜಾಲತಾಣಗಳಲ್ಲಿ ಅನುಷ್ಠಾನಗೊಳಿಸಲು ಸರ್ಕಾರವು ಆದೇಶಿಸಿದೆ.

1. ಸಾರ್ವಜನಿಕರು ಜಾಲತಾಣವನ್ನು ಪ್ರವೇಶಿಸಿದ ತಕ್ಷಣ "ಸರ್ಕಾರದ ಕಾರ್ಯದಕ್ಷತೆ, ಪಾರದರ್ಶಕತೆ, ನಾಗರಿಕ ಸ್ನೇಹಿ ಹಾಗೂ ಸಂವಹನ ಶೀಲತೆಯನ್ನು ಪ್ರತಿನಿಧಿಸುತ್ತವೆ" ಎಂದು ಭಾವಿಸುವಂತಿರಬೇಕು ಹಾಗೂ ಶೀಘ್ರವಾಗಿ ಮಾಹಿತಿ ನೀಡುವಂತಿರಬೇಕು. ಇದಲ್ಲದೇ ಜಾಲತಾಣಗಳು ಸರ್ಕಾರದ ಅಧಿಕೃತ ಆಡಳಿತ ಭಾಷೆಯಾದ ಕನ್ನಡದಲ್ಲಿ ಇರತಕ್ಕದ್ದು.
2. ಜಾಲತಾಣಗಳಲ್ಲಿ ರಾಷ್ಟ್ರೀಯ ಗುರುತ್ವದ ಅಂಶಗಳು, ಗೌಪ್ಯತೆ ನಿರ್ಮಾಣದ ಅಂಶಗಳು, ಮಾಹಿತಿಯ ವ್ಯಾಪ್ತಿ [(ಸೇವೆಗಳು, ಯೋಜನೆಗಳು, ನಮ್ಮ ಬಗ್ಗೆ, ಸಂಪರ್ಕಿಸಿ, ದಾಖಲೆಗಳು, ನಮೂನೆಗಳು, ಪ್ರಕಟಣೆಗಳು, ನೇಮಕಾತಿ ಮತ್ತು ಟೆಂಡರ್, ಆದೇಶ ಮತ್ತು ಸುತ್ತೋಲೆಗಳು ಇತ್ಯಾದಿ ಮಾಹಿತಿಯ ಬಗ್ಗೆ)(Services, Projects, ....)], ಮಾಹಿತಿಯ ಗುಣಮಟ್ಟ, ವಿನ್ಯಾಸ, ಅಭಿವೃದ್ಧಿ, ಪ್ರಕಟಣೆ, ಪ್ರಚಾರ ಮತ್ತು ಜಾಲತಾಣದ ನಿರ್ವಹಣೆ ಬಗ್ಗೆ ಮಾರ್ಗದರ್ಶನ ನೀಡುವ ಮಾಹಿತಿ ತಂತ್ರಜ್ಞಾನ ಕಾಯ್ದೆ, 2008ರ ಪ್ರಕಾರ "ಭಾರತ ಸರ್ಕಾರದ ಜಾಲತಾಣ ಮಾರ್ಗಸೂಚಿ (Guidelines for Indian Government Websites-GIGW)"ಗಳನ್ನು ರಾಜ್ಯ ಸರ್ಕಾರದ ಜಾಲತಾಣಗಳಲ್ಲಿ ಅನುಸರಿಸತಕ್ಕದ್ದು.
3. ಜಾಲತಾಣಗಳಲ್ಲಿ ಪಠ್ಯೇತರ ಮಾಹಿತಿಗೆ ಪರ್ಯಾಯ ಮಾಹಿತಿ, ಪರದೆ ವಾಚಕಗಳು, ಬಣ್ಣಗಳ ಬಳಕೆ, ಜಾಲತಾಣ ರಚನೆಗೆ ಬಳಸಬೇಕಾದ ಭಾಷೆಗಳ ಮತ್ತು ಜಾಲತಾಣದಲ್ಲಿ ಮಾಹಿತಿ ಬಗ್ಗೆ ಹಾಗೂ ವಿಕಲಚೇತನ ಸ್ನೇಹಿಯಾಗಿ ಜಾಲತಾಣವನ್ನು ರೂಪಿಸಲು ಮಾರ್ಗದರ್ಶನ ನೀಡುವ "ಬಳಕೆದಾರ ಮಾರ್ಗಸೂಚಿ (Accessibility Guidelines)" ಗಳನ್ನು ಜಾಲತಾಣಗಳಲ್ಲಿ ಅಳವಡಿಸಿಕೊಳ್ಳತಕ್ಕದ್ದು.
4. ಜಾಲತಾಣಗಳಲ್ಲಿ ಕನ್ನಡ ಭಾಷೆಯ ಬಳಕೆ, ಭಾಷಾ ಶಿಷ್ಟಾಚಾರ, ಮುಕ್ತವಾಗಿ ಲಭ್ಯವಿರುವ ತಂತ್ರಜ್ಞಾನಗಳ ಬಳಕೆ, ಮಾಹಿತಿಯ ವಿವರಣೆ, ಏಕರೂಪದ ವಿನ್ಯಾಸ ಹಾಗೂ ಏಕರೂಪದ ಡೊಮೈನ್ ಹೆಸರುಗಳ ನೋಂದಣಿ, ಅಧಿಕೃತ ಇ-ಅಂಚೆ ವಿಳಾಸ ನಮೂದಿಸಬೇಕು. ಜಾಲತಾಣಗಳ ಪ್ರಾಥಮಿಕ ಪುಟವು ಕನ್ನಡದಲ್ಲೇ ತೆರೆದುಕೊಳ್ಳತಕ್ಕದ್ದು
5. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ)ಯ ವ್ಯಾಪ್ತಿಯಲ್ಲಿನ ಇ-ಆಡಳಿತ ಕೇಂದ್ರವು "ಜಾಲತಾಣದ ಸಿದ್ಧಮಾದರಿ (template)" ಯೊಂದನ್ನು ಅಭಿವೃದ್ಧಿ ಪಡಿಸಿರುತ್ತದೆ. ಈ ಜಾಲತಾಣದ ಸಿದ್ಧಮಾದರಿ (Template) ಯಲ್ಲಿ "ಭಾರತ ಸರ್ಕಾರದ ಜಾಲತಾಣ ಮಾರ್ಗಸೂಚಿಗಳು (Guidelines for Indian Government Websites-GIGW)", "ಬಳಕೆದಾರ ಮಾರ್ಗಸೂಚಿಗಳು (Accessibility Guidelines), ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಶಿಫಾರಸ್ಸಗಳು" ಹಾಗೂ "ಮಾಹಿತಿ